# ದುರಂತದ ಕಥೆ ಉಸುರುವ ಶಾಂತಿ ಸ್ಮಾರಕ



ಹಿರೋಷಿಮಾ ಪೀಸ್ ಮೆಮೋರಿಯಲ್ ಪಾರ್ಕ್

ಪ್ರಪಂಚದ ಅತಿ ದೊಡ್ಡ ದುರಂತಕ್ಕೆ ಸಾಕ್ಷಿಯಂತೆ ನಿಂತಿರುವ ಜಪಾನಿನ ಹಿರೋಷಿಮಾ ಹಾಗೂ ನಾಗಾಸಾಕಿ ನಗರಗಳಲ್ಲಿ ಈಗಲೂ ಯುದ್ಧದ ಕರಿನೆರಳನ್ನು ಕಾಣಬಹುದು. ಇಲ್ಲಿನ ಸ್ಮಾರಕಗಳು ಶಾಂತಿಯನ್ನು ಹಂಬಲಿಸುವ ಜನರ ದ್ಯೋತಕವೂ ಆಗಿವೆ.


■ ಕೋಟೂರ್ ಸಂಪತ್

ಯುದ್ಧದ ಕರಾಳತೆಯನ್ನು ನೆನಪಿಸುವಂತೆ ಉಳಿದಿರುವ 'ಗೆನ್‌ಬಾಕು ಡೋಮ್' ಕಟ್ಟಡ



**1939–45**ರ ಅವಧಿ ಎರಡನೇ ಮಹಾಯುದ್ಧದ ಸಂಕಷ್ಟ ಕಾಲ. ಜಪಾನ್‌ನ ಬೇಷರತ್ ಶರಣಾಗತಿಗೆ ಅಮೆರಿಕ ಒತ್ತಾಯಿಸುತ್ತಿತ್ತು. ಆದರೆ ಅಮೆರಿಕದ ಒತ್ತಾಯಕ್ಕೆ ಜಪಾನ್ ಮಣಿಯಲಿಲ್ಲ. ಇದರಿಂದ ಕೆರಳಿದ ಅಮೆರಿಕ ಉದ್ರಿಕ್ತಗೊಂಡು ಟೋಕಿಯೊ ನಗರದ ಮೇಲೆ ಬಾಂಬ್ ದಾಳಿ ಮಾಡಿತು. ಇದರಿಂದಾಗಿ ಅಪಾರ ಪ್ರಮಾಣದ ಸಾವು ನೋವು ಉಂಟಾದರೂ ಜಪಾನ್ ಶರಣಾಗಲಿಲ್ಲ.

ಯುದ್ಧ ಮುಂದುವರಿದಂತೆ ಸೋವಿಯತ್ ರಷ್ಯಾ ಕೂಡ ಜಪಾನ್ ಮೇಲೆ ದಾಳಿ ಮಾಡಲು ತಯಾರಿ ನಡೆಸತೊಡಗಿತು. ಜಪಾನ್ ಮೇಲಿನ ವಿಜಯದಲ್ಲಿ ರಷ್ಯಾ ಜೊತೆ ಪಾಲು ಹಂಚಿಕೊಳ್ಳಲು ಬಯಸದ ಅಮೆರಿಕ ಪರಮಾಣು ಅಸ್ತ್ರದ ಪ್ರಯೋಗಕ್ಕೆ ನಿರ್ಧರಿಸಿತು.



ನಾಗಾಸಾಕಿಯ ಶಾಂತಿ ಪ್ರತಿಮೆ

ಆಗಸ್ಟ್ 6, 1945ರಂದು, ಜಪಾನ್ ದೇಶದ ಜನನಿಬಿಡ ಪ್ರದೇಶ ಹಿರೋಷಿಮಾದ ಮೇಲೆ ಅಮೆರಿಕ ಅಣುಬಾಂಬ್ ದಾಳಿ ನಡೆಸಿತು. ನಂತರದ ಮೂರು ದಿನಗಳಲ್ಲೇ, ಆಗಸ್ಟ್ 9, 1945ರಂದು ನಾಗಾಸಾಕಿ ನಗರದ ಮೇಲೂ ಬಾಂಬ್ ದಾಳಿ ನಡೆಯಿತು.

ಈ ಅಣುಬಾಂಬ್ ದಾಳಿಗಳು ಎರಡೂ ನಗರಗಳನ್ನು ಮಹಾಸ್ಮಶಾನವನ್ನಾಗಿಸಿದವು. ಸುಮಾರು 2 ಲಕ್ಷ 26 ಸಾವಿರ ನಾಗರಿಕರು ಜೀವ ಕಳೆದುಕೊಂಡರು. ಪ್ರಪಂಚದ ಅತಿ ದೊಡ್ಡ ಮಾನವ ನಿರ್ಮಿತ ದುರಂತಗಳಲ್ಲಿ ಇದೂ ಒಂದು.

ಅಣುಬಾಂಬ್ ಸ್ಫೋಟದಿಂದಾಗಿ ಎರಡೂ ನಗರಗಳ ಬಹುತೇಕ ಕಟ್ಟಡಗಳು ನೆಲಸಮವಾದವು. ಆದರೆ ಹಿರೋಷಿಮಾ ನಗರದಲ್ಲಿ ಒಂದು ಕಟ್ಟಡ ಮಾತ್ರ ಕೊಂಚ ಜಖಂಗೊಂಡು ಭೂಮಿಯ ಮೇಲೆ ಆಶ್ಚರ್ಯಕರ ರೀತಿಯಲ್ಲಿ ಉಳಿದುಕೊಂಡಿತು. ಆ ಕಟ್ಟಡವೇ 'ಗೆನ್‌ಬಾಕು ಡೋಮ್'. ಆ ಕಟ್ಟಡವನ್ನು ಹಾಗೂ ಹೊಸದಾಗಿ ನಿರ್ಮಿಸಿದ 'ಹಿರೋಷಿಮಾ ಶಾಂತಿ ಉದ್ಯಾನ'ವನದಲ್ಲಿರುವ ಮತ್ತೊಂದು ಕಟ್ಟಡವನ್ನು ಜಪಾನ್ 'ರಾಷ್ಟ್ರೀಯ ಸ್ಮಾರಕ'ಗಳೆಂದು ಘೋಷಿಸಿದೆ. ಈ ಸ್ಮಾರಕಗಳಿಗೆ ಯುನೆಸ್ಕೋ ಮಾನ್ಯತೆಯೂ ದೊರೆತಿದೆ.

ಅಣುಬಾಂಬ್ ಸ್ಫೋಟದಿಂದಾಗಿ ಜೀವ ಕಳೆದುಕೊಂಡವರಿಗಾಗಿ 1954ರಲ್ಲಿ ಒಂದು ಪ್ರತ್ಯೇಕ ಸ್ಮಾರಕ ಉದ್ಯಾನವನ್ನು ನಿರ್ಮಿಸಲು ಜಪಾನ್ ನಿಶ್ಚಯಿಸಿತು. ಅದರ ಫಲವೇ 'ಹಿರೋಷಿಮಾ ಪೀಸ್ ಮೆಮೋರಿಯಲ್ ಪಾರ್ಕ್'. ಹಿರೋಷಿಮಾ ನಗರದ ಮಧ್ಯ ಭಾಗದಲ್ಲಿರುವ ಈ ಶಾಂತಿ ಉದ್ಯಾನವನಕ್ಕೆ ಪ್ರತಿ ವರ್ಷ ಹತ್ತು ಲಕ್ಷಕ್ಕೂ ಹೆಚ್ಚಿನ ಪ್ರವಾಸಿಗರು ಭೇಟಿಕೊಡುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in